ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 25-31
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗ್ರಾಮ ಪಂಚಾಯಿತಿ ಮತ್ತು ಅಭಿವೃದ್ಧಿ

**ಓಬಯ್ಯ ಆರ್.ಎನ್[1]. ಮತ್ತು ಡಾ. ಬಿ. ಸರೋಜಾ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

***Abstract:***
*ಅಭಿವೃದ್ಧಿ ಎನ್ನುವ ಪರಿಭಾವನೆಯು ನಿರಂತರವಾಗಿ ಬದಲಾಗುತ್ತಿರುವ ಒಂದು ಪರಿಕಲ್ಪನೆಯಾಗಿದೆ. ಕಳೆದ ಶತಮಾನದ ಐವತ್ತರ ದಶಕದಲ್ಲಿ ಅಭಿವೃದ್ಧಿ ಎಂಬುದು ಕೇವಲ ಆರ್ಥಿಕಾಭಿವೃದ್ಧಿ ಎಂಬುದಾಗಿ ಗುರುತಿಸಲ್ಪಡುತ್ತಿದ್ದು ಒಂದು ರಾಷ್ಟ್ರದಲ್ಲಿ ನಿರಂತರ ಆದಾಯ ಏರಿಕೆ ಪ್ರಕ್ರಿಯೆಯನ್ನು ಅಭಿವೃದ್ಧಿಗೆ ಪರ್ಯಾಯವೆಂದು ಗುರುತಿಸಲಾಗುತ್ತಿತ್ತು. ನಂತರದ ದಶಕಗಳಲ್ಲಿ ಅದರ ಅರ್ಥ ಮತ್ತು ವ್ಯಾಪ್ತಿಗಳು ಬದಲಾಗುತ್ತಾ ಸಾಗಿರುವುದನ್ನು ಕಾಣಬಹುದು. ಆರ್ಥಿಕಾಭಿವೃದ್ಧಿಯಾಗಿರದೆ ಅದರಂತೆ ಇಂದು ಅಭಿವೃದ್ಧಿ ಎಂದರೆ ಕೇವಲ ಅದು ಸಮಾಜೋ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನೂ ಒಳಗೊಳ್ಳುತ್ತದೆ. ಹೆಚ್ಚಾಗಿ ಅಭಿವೃದ್ಧಿಯು ಇಂದು ಸಾಮಾಜಿಕ ಅಭಿವೃದ್ಧಿ ಎಂಬುದಾಗಿ ಗುರುತಿಸಲ್ಪಡುತ್ತದೆ. ಒಟ್ಟಾರೆ, ಮಾನವನ ಸಾಮಾಜಿಕ ಜೀವನದಲ್ಲಿ ಕಂಡುಬರುವ ಎಲ್ಲ ಬಗೆಯ ಆಯಾಮಗಳನ್ನೂ ಸಮಗ್ರವಾದ ಅರ್ಥದಲ್ಲಿ ಅಭಿವೃದ್ಧಿ ಎಂದೇ ಕರೆಯಲಾಗುತ್ತದೆ. ಮಾನವ ಜೀವನ ವಿಕಾಸಕ್ಕೆ ಅಗತ್ಯವಾದ ಸಮರ್ಪಕ ಮತ್ತು ಸವಿಸ್ತಾರ ವಾತಾವರಣ–ಪರಿಸರವನ್ನೇ ಅಭಿವೃದ್ಧಿ ಪೂರಕ ವಾತಾವರಣ ಎಂದು ಬಿಂಬಿಸಲಾಗುತ್ತಿದೆ. ಪ್ರಸ್ತುತ ಲೇಖನದಲ್ಲಿ ಗ್ರಾಮ ಪಂಚಾಯಿತಿ ಮತ್ತು ಅಭಿವೃದ್ಧಿ ಕುರಿತು ಚರ್ಚಿಸಲಾಗಿದೆ.*

***Keywords:*** *ಸಾಮಾಜಿಕ ಅಭಿವೃದ್ಧಿ, ಗ್ರಾಮ ಪಂಚಾಯಿತಿ, ಆಡಳಿತ, ಅಭಿವೃದ್ಧಿ*

**ಪೀಠಿಕೆ**

ಅಭಿವೃದ್ಧಿಯ ಸಾಧನೆ ಅಥವಾ ಸಾಕಾರಕ್ಕಾಗಿ ಅನೇಕ ಅಗತ್ಯಗಳು ಕಂಡುಬರುತ್ತವೆ. ಪಮುಖವಾಗಿ ರಾಜಕೀಯ ಮತ್ತು ಆಡಳಿತಕ್ಕೆ ಸಂಬಂಧಿಸಿದ ಅಂಶಗಳಾಗಿದ್ದು ಈ ಪ್ರಕ್ರಿಯೆಯು ತುಂಬಾ ವಿಶಾಲವಾದುದು. ಇದರಲ್ಲಿ ಸರ್ಕಾರ, ಮಾರುಕಟ್ಟೆ ಮತ್ತು ಸಂಘ ಸಂಸ್ಥೆಗಳು ತಮ್ಮದೇ ಆದ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತವೆ. ಬದಲಾದ ಆಡಳಿತ ಪರಿಭಾವನೆಯು ಸರ್ಕಾರವನ್ನಷ್ಟೇ ಅಲ್ಲದೆ ಆಳಲ್ಪಡುವ ಜನರನ್ನೂ ಒಳಗೊಳ್ಳುತ್ತದೆ. ಹಾಗೆಯೇ ಈ ವ್ಯವಸ್ಥೆಯು ಹಿಂದಿನ ರಾಜ್ಯಾಡಳಿತಕ್ಕೆ (ಕೇಂದ್ರೀಕೃತ) ಬದಲಾಗಿ ಉತ್ತಮ ಆಡಳಿತ (ವಿಕೇಂದ್ರೀಕೃತ)ವನ್ನು ಪತಿನಿಧಿಸುತ್ತದೆ. ಕಳೆದ ಶತಮಾನದ 80ರ ದಶಕದ ನಂತರದಲ್ಲಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯು ಉತ್ತಮ ಮತ್ತು ಸೂಕ್ತವಾದುದೆಂದು ಪರಿಗಣಿಸಲ್ಪಡುತ್ತದೆ. ಅದರಂತೆ ಆಡಳಿತ ಪ್ರಕ್ರಿಯೆಯು ಇಂದು ತುಂಬಾ ಸಂಕೀರ್ಣವಾದುದಾಗಿದ್ದು ಹಲವು ಅಂಶಗಳನ್ನು ಒಳಗೊಂಡಿದೆ. ಈ ನಿಟ್ಟಿನಲ್ಲಿ ಇಂದು ಅಭಿವೃದ್ಧಿ

***Please cite this article as:*** ಓಬಯ್ಯ ಆರ್.ಎನ್. ಮತ್ತು ಬಿ. ಸರೋಜಾ. (2025). ಗ್ರಾಮ ಪಂಚಾಯಿತಿ ಮತ್ತು ಅಭಿವೃದ್ಧಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(3), 25–31

ಸಾಕಾರವು ಉತ್ತಮ ಆಡಳಿತದ ಮೂಲಕ ಸಾಧ್ಯ ಎನ್ನುವ ಕಲ್ಪನೆ ಚಾಲ್ತಿಗೆ ಬಂದಿದೆ. ಆದುದರಿಂದ ಉತ್ತಮ ಆಡಳಿತ ವ್ಯವಸ್ಥೆಯನ್ನು ಒದಗಿಸುವುದು ಇಂದು ಕೇವಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾತ್ರವಲ್ಲದೆ ಅದರ ಕೆಳಗಿನ ಸ್ಥಳೀಯ ಸರ್ಕಾರಗಳು ಹೆಚ್ಚಿನ ಪ್ರಮಾಣದಲ್ಲಿ ಭಾಗಿಯಾಗಬೇಕಿದೆ. ಈ ನಿಟ್ಟಿನಲ್ಲಿ ಭಾರತ ದೇಶದಲ್ಲಿ ಇಂದು ವಿಕೇಂದ್ರೀಕೃತ ಆಡಳಿತ ನೀಡುವುದು ಪಂಚಾಯತ್‌ರಾಜ್ ಸಂಸ್ಥೆಗಳು ಎನ್ನುವುದು ಸದ್ಯದ ಚಿಂತನೆ ಹಾಗೂ ಸಂಗತಿಯಾಗಿದೆ. ಹಾಗಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಂಚಾಯತ್ ಅದರಲ್ಲೂ ಗ್ರಾಮ ಪಂಚಾಯತ್ ಸಂಸ್ಥೆಗಳು ಪಧಾನ ಪಾಲುದಾರರಾಗುತ್ತವೆ.

### ಗ್ರಾಮೀಣಾಬಿವೃದ್ಧಿಯಲ್ಲಿ ಆಡಳಿತ

ಗ್ರಾಮೀಣಾಭಿವೃದ್ಧಿ ಎಂದರೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಎಂಬುದು ಮಾತ್ರವಲ್ಲ, ಬದಲಿಗೆ ಗಾಮೀಣ ಸಮುದಾಯಗಳ ಸ್ವಯಂಪೋಷಿತ, ಆರೋಗ್ಯಕರ ಅಜ್ಞಾನವನ್ನು ತೊಡೆದುಹಾಕುವುದು. ಬಡತನ ನಿವಾರಣೆ ಮಾಡಿ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವುದು ಕೂಡ ಮುಖ್ಯವಾಗಿದೆ. ರಾಷ್ಟ್ರದ ದೇಶೀಯ ಒಟ್ಟು ಉತ್ಪನ್ನ ಹೆಚ್ಚುವಷ್ಟೇ ಅಲ್ಲದೇ ಹೆಚ್ಚಳವಾದ ಆದಾಯದಿಂದ ಬಡತನ ಮತ್ತು ಸಿರಿತನದ ಅಂತರವನ್ನು ಕಡಿಮೆ ಮಾಡುವ ಮೂಲಕ ಅಂತಿಮವಾಗಿ ಉತ್ತಮ ಮಾನವಾಭಿವೃದ್ಧಿ ಸೂಚಿಯನ್ನು ಹೆಚ್ಚಿಸುವುದಾಗಿದೆ. ಈ ನಿಟ್ಟಿನಲ್ಲಿ ಅವಲೋಕಿಸುವುದಾದರೆ ಭಾರತವು, ಸ್ವಾತಂತ್ರ್ಯಾ ನಂತರದಲ್ಲಿ ನೀತಿ, ಕಾರ್ಯಕಮಗಳನ್ನು, ಯೋಜನೆಯನ್ನು ರೂಪಿಸುತ್ತಿದ್ದು, ಪಂಚವಾರ್ಷಿಕ ಯೋಜನೆಗಳ ಮೂಲಕ ಹಣಕಾಸಿನ ಸಂಪನ್ಮೂಲಗಳನ್ನು ತೊಡಗಿಸುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳು ಮತ್ತು ಯೋಜನೆಗಳು ಸಂಬಂಧಪಟ್ಟ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವತಿಯಿಂದ ಶಿಕ್ಷಣ, ಆರೋಗ್ಯ ಕುಡಿಯುವ ನೀರು, ಶೌಚಾಲಯ, ಸಾರಿಗೆ ಮತ್ತು ಸಂಪರ್ಕ ಹಾಗೂ ಇನ್ನುಳಿದ ಮೂಲ ಸೌಕರ್ಯಗಳ ಕ್ಷೇತಗಳಲ್ಲಿ ಅನುಷ್ಠಾನಗೊಳ್ಳುತ್ತಿರುವುದು ಸರಿಯಷ್ಟೆ. ಅಂತೆಯೇ ಈ ಎಲ್ಲಾ ಕ್ಷೇತಗಳೂ ಸಹ ಭಿನ್ನ ಭಿನ್ನ ರೀತಿಯ ಪ್ರತಿಕ್ರಿಯೆಗಳನ್ನು ತೋರುತ್ತಿರುವುದು ಕೂಡ ಕಂಡುಬರುತ್ತಿದೆ. ತಳಮಟ್ಟದಲ್ಲಿ ಗೋಚರಿಸುತ್ತಿರುವ ಈ ಬದಲಾವಣೆಗಳು ಮಾನವಾಭಿವೃದ್ಧಿಯ ವಿವಿಧ ಸೂಚಿಗಳೇ ಆಗಿವೆ. ಈ ಎಲ್ಲಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಸಾಧನೆಗೆ ಸಮಗ್ರ ಅಭಿವೃದ್ಧಿ ಪರಿಭಾವನೆ, ಯೋಜನಾ ಪ್ರಕ್ರಿಯೆ, ಬೆಳ ವಣಿಗೆ ಕೇಂದ್ರ ವಿಧಾನ, ನಿರ್ವಹಣ ವಿಧಾನ, ಸಂವಹನ ವ್ಯವಸ್ಥೆ ಮುಂತಾದವುಗಳು ಅತ್ಯಗತ್ಯವಾಗಿ ರೂಪುಗೊಳ್ಳಬೇಕಿದೆ.

### ಆಡಳಿತ ಮತ್ತು ವಿಕೇಂದ್ರೀಕರಣ

ವಿಕೇಂದ್ರೀಕರಣ ಎನ್ನುವುದು ಒಂದು ಪ್ರಕಿಯೆಯಾಗಿದ್ದು ಅಧಿಕಾರವೆನ್ನುವುದು ಆಡಳಿತ ಸಂಸ್ಥೆಗಳ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟಗಳಲ್ಲಿ ಪ್ರಜಾಪ್ರಭುತ್ವದ ಪುನರ್‌ರಚನೆಯಾಗುತ್ತದೆ. ವಿಕೇಂದ್ರೀಕರಣ ಎಂಬುದು ನಿಜವಾದ ಅರ್ಥದಲ್ಲಿ ಪ್ರಾತಿನಿಧಿಕವಾಗುತ್ತದೆ. ಏಕೆಂದರೆ ವಿಕೇಂದ್ರೀಕರಣವು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ತಳಮಟ್ಟದ ಜನರು ಪಾಲ್ಗೊಳ್ಳುವುದನ್ನು ಸಾಧ್ಯವಾಗಿಸುತ್ತದೆ. ಜೊತೆಗೆ ಸ್ಥಳೀಯ ಮಟ್ಟದಲ್ಲಿ ಸಶಕ್ತೀಕರಣ ಯೋಜನೆಗಳನ್ನು ಜಾರಿಮಾಡಲು ಅಧಿಕಾರಿಗಳಿಗೆ ಸಾಧ್ಯವಾಗುತ್ತದೆ.

ಸ್ಥಳೀಯ ಸರ್ಕಾರವಾದ ಗ್ರಾಮಪಂಚಾಯಿತಿ ಮೂಲಕ ಜನರಿಗೆ ಕೇವಲ ಮೂಲಭೂತ ಸೌಕರ್ಯಗಳನ್ನು ಮಾತ್ರ ಒದಗುಸುವುದಿಲ್ಲ ಜೊತೆಗೆ ಗ್ರಾಮೀಣ ಸಮುದಾಯಗಳ ನಡುವೆ ರಾಜಕೀಯ ಪ್ರಜ್ಞೆಯನ್ನು ಕೂಡ ಮೂಡಿಸುತ್ತಿದೆ. ಸಂವಿಧಾನದ 73ನೇ ತಿದ್ದುಪಡಿಯಾದಾಗಿನಿಂದ ಪಂಚಾಯತ್‌ಗಳ ರಾಜಕೀಯ ಸಬಲೀಕರಣ ಪ್ರಕ್ರಿಯೆಯು ಸಾಕಷ್ಟು ಸಾಧ್ಯವಾಗಿದೆ. ಚುನಾವಣೆಗಳು ನಿಯತಕಾಲಿಕವಾಗಿ ನಡೆಯುತ್ತಿದ್ದು, ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು, ಇತರೆ ಹಿಂದುಳಿದ ವರ್ಗಗಳು ಅವುಗಳ ಪಮಾಣಕ್ಕೆ ಅನುಗುಣವಾಗಿ ರಾಜಕೀಯ

ಮೀಸಲಾತಿ ನೀಡಿ ಎಲ್ಲಾ ಸಮುದಾಯಗಳ ಪ್ರತಿನಿಧಿಗಳಿರುವಂತೆ ಮಾಡುತ್ತಿದೆ. ಆಡಳಿತ ವಿಕೇಂದ್ರೀಕರಣದಿಂದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಗ್ರಾಮಪಂಚಾಯಿತಿ ಮೂಲಕ ಸುಲಭವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

**ಗ್ರಾಮಪಂಚಾಯಿತಿಗಳ ಕಾರ್ಯಾಚರಣೆ**

ಗಾಮೀಣ ಜನರ ಜೀವನಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರವು ಆರೋಗ್ಯ, ಶಿಕ್ಷಣ, ಉದ್ಯೋಗ, ವಸತಿ, ಶೌಚಾಲಯ, ರಸ್ತೆ ಸಂಪರ್ಕ, ವಿದ್ಯುಚ್ಛಕ್ತಿ, ಸಾಮಾಜಿಕ ಸಹಾಯ, ಹಳ್ಳಿಯ ಮಹಿಳೆಯರ ಗುಣಾತ್ಮಕ ಜೀವನಕ್ಕಾಗಿ ಹಲವು ಹತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಅನುಷ್ಠಾನಗೊಳಿಸುವಲ್ಲಿ ದಕ್ಷ ಗ್ರಾಮೀಣಾಭಿವೃದ್ಧಿ ಸಿಬ್ಬಂದಿಗಳ ಅಗತ್ಯವಿದೆ. ಕರ್ನಾಟಕ ರಾಜ್ಯಾದ್ಯಂತ ಅಲ್ಲಲ್ಲಿ ಕೆಲವು ಗ್ರಾಮ ಪಂಚಾಯಿತಿಗಳು ಉತ್ತಮ ಮತ್ತು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಕಾರ್ಯಾಚರಣೆಯ ಹಿಂದೆ ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಶ್ರಮಿಸುತ್ತಿರುವುದು ಕಾರಣವಾಗಿದೆ. ಉದಾಹರಣೆಗೆ, ಕೋಲಾರ ಜಿಲ್ಲೆಯ ಐತರಾಸನಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯವೈಖರಿಯನ್ನು ಪರಿಗಣಿಸಬಹುದು. ಐತರಾಸನಹಳ್ಳಿ ಗ್ರಾಮ ಪಂಚಾಯಿತಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಬರುವ ಹೊತ್ತಿಗೆ ಈ ಪಂಚಾಯಿತಿಯು ಸಾಕಷ್ಟು ಪ್ರಖ್ಯಾತವೇ ಆಗಿಹೋಗಿತ್ತು. ಉದ್ಯೋಗ ಖಾತರಿ ಯೋಜನೆಯ ಜಾಬ್‌ಕಾರ್ಡುಗಳು ಎಷ್ಟು ಮಂದಿ ಕೂಲಿಗಳ ಬಳಿ ಇವೆ? ಎಷ್ಟು ಕಾರ್ಡುಗಳು ಗುತ್ತಿಗೆದಾರರ ಬಳಿ ಇವೆ? ಅಸಲಿಗೆ ಎಷ್ಟು ಕಾರ್ಡುಗಳು ವಿತರಣೆಯಾಗಿವೆ? ಎಷ್ಟು ಮಂದಿ ಕಾಮಗಾರಿಗಳಲ್ಲಿ ಕೆಲಸ ಮಾಡಿದ್ದಾರೆ? ಎಂಬಿತ್ಯಾದಿ ಪ್ರಶ್ನೆಗಳು ಹೊಸ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಕಾಡಲಾರಂಭಿಸಿದವು. ವಾಸ್ತವವಾಗಿ ಜಾಬ್ ಕಾರ್ಡುಗಳೇ ಕಾಣೆಯಾಗಿದ್ದವು. ಕೆಲವರ ಬಳಿ ಎರಡೆರಡು ಜಾಬ್‌ಕಾರ್ಡ್‌ಗಳಿರುವುದು ಬೆಳಕಿಗೆ ಬಂತು. ಭಿನ್ನಧರ್ಮದ ಹೆಸರುಳ್ಳವರು ಒಂದೇ ಕುಟುಂಬದ ನಿವಾಸಿಗಳೆಂಬ ದಾಖಲೆಗಳನ್ನೂ ಜಾಬ್ ಕಾರ್ಡುಗಳು ಹೇಳುತ್ತಿದ್ದವು. ಪಂಚಾಯಿತಿಯಲ್ಲಿ ಎರಡು ವರ್ಷದಿಂದ ಕ್ಯಾಷ್‌ಬುಕ್ ನಿರ್ವಹಣೆಯನ್ನೇ ಮಾಡದಿರುವುದು ಬೆಳಕಿಗೆ ಬಂತು. ಜನರಲ್ಲಿ ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳ ಬಗ್ಗೆಯೇ ನಂಬಿಕೆ ಕುಸಿದಿತ್ತು.

**ಆಡಳಿತಾತ್ಮಕ ಗೊಂದಲ ಮತ್ತು ಪಂಚಾಯತ್‌ರಾಜ್**

ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರೀಕರಣದ ಪ್ರಯೋಗ ಆರಂಭವಾಗಿ ಸುಮಾರು ಮೂರು ದಶಕಗಳಾಗಿವೆ. ಈ ಅವಧಿಯಲ್ಲಿ ಹಲವು ಬದಲಾವಣೆಗಳಾಗಿವೆ. ಮೂರು ಬಾರಿ ಕಾನೂನನ್ನು ಬದಲಾಯಿಸಲಾಗಿದೆ. ಇದೀಗ ನಾಲ್ಕನೇ ಬಾರಿಗೆ ಕಾಯ್ದೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ ಕಾರ್ಯರೂಪಕ್ಕೆ ತರಲು ಪ್ರಯತ್ನ ನಡೆಯುತ್ತಲಿದೆ. ಎರಡು ಹಂತದ ಚುನಾಯಿತ ಪಂಚಾಯಿತಿ ವ್ಯವಸ್ಥೆಯನ್ನು ಮೂರು ಹಂತದ ವ್ಯವಸ್ಥೆಯಾಗಿ ಪರಿವರ್ತಿಸಲಾಗಿದೆ. ಹಲವಾರು ಗ್ರಾಮಗಳಿಗೊಂದು ಮಂಡಲ ಪಂಚಾಯಿತಿಯ ಬದಲು ಗ್ರಾಮಕ್ಕೊಂದು ಪಂಚಾಯಿತಿಗಳಾಗಿವೆ. ಸಂವಿಧಾನದ 73ನೇ ತಿದ್ದುಪಡಿಯ ರಕ್ಷಣೆ ಇರುವುದರಿಂದ ಪಂಚಾಯಿತಿಗಳಿಗೆ ಐದು ವರ್ಷಕ್ಕೊಮ್ಮೆ ಚುನಾವಣೆಗಳು ನಿರಾತಂಕವಾಗಿ ನಡೆಯುವ ವ್ಯವಸ್ಥೆಯಾಗಿದೆ. ಅನಾವಶ್ಯಕವಾಗಿ ಚುನಾವಣೆ ಮುಂದೂಡಲು ರಾಜ್ಯ ಸರ್ಕಾರ ಪಯತ್ನಿಸಿದಾಗಲೂ ನ್ಯಾಯಾಲಯಗಳು ಮಧ್ಯಪವೇಶಿಸಿ ಪ್ರಜಾಪಭುತ್ವವನ್ನು ಎತ್ತಿ ಹಿಡಿದಿವೆ. ಇದರ ಜೊತೆಗೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹರಿದು ಬರುವ ಹಣ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ಸಂಸ್ಥೆಗಳ ಸದಸ್ಯರಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತದಿಂದ ವಿಧಾನ ಪರಿಷತ್ತಿಗೆ ನಡೆಯುವ ಆಯ್ಕೆಯಲ್ಲಿ

ಪಾಲ್ಗೊಳ್ಳಲು ಅನುವಾಗುವಂತೆ ಮತದಾನದ ಹಕ್ಕು ದೊರೆತಿದೆ.

ಇಷ್ಟೆಲ್ಲಾ ಆದರೂ ಹೊಸ ಆಡಳಿತ ವ್ಯವಸ್ಥೆ ಇನ್ನೂ ತನ್ನದೇ ಆದ ನೆಲೆಯೊಂದನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಅಧಿಕಾರ ವಿಕೇಂದ್ರೀಕರಣದ ಅರಿವನ್ನು ಗ್ರಾಮೀಣರಿಗೆ ಮುಟ್ಟಿಸುವ ಉದ್ದೇಶವು ನೆರವೇರಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಮುಖ್ಯವಾಗಿ ರಾಜಕೀಯ ನಾಯಕತ್ವ ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಇರುವ ಬದ್ಧತೆಯ ಅಭಾವ, ಅಧಿಕಾರ ಹಂಚಿಕೊಳ್ಳುವ ವಿಷಯದಲ್ಲಿ ಅವರಿಗಿರುವ ಹಿಂಜರಿಕೆ ಇಡೀ ಪಂಚಾಯತ್‌ರಾಜ್ ವ್ಯವಸ್ಥೆಯನ್ನೇ ಗೊಂದಲದ ಸುಳಿಗೆ ಸಿಲುಕಿಸಿದೆ.

ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಜನರ ಜೊತೆಗೆ ಸಂಪರ್ಕವಿರುವುದು ಗ್ರಾಮ ಪಂಚಾಯಿತಿಗೆ ಮಾತ್ರ. ಇದರಲ್ಲಿ ಗ್ರಾಮ ಸಭೆಗಳ ಪಾತ್ರ ಮಹತ್ವವಾದುದು ಆದರೆ ಬಹುತೇಕ ಗ್ರಾಮ ಪಂಚಾಯಿತಿಗಳು ಗ್ರಾಮಸಭೆಗಳನ್ನೇ ಮಾಡುವುದಿಲ್ಲ ಹಾಗೂ ಗ್ರಾಮೀಣ ಜನರಿಗೆ ಅದರ ಅರಿವು ಕೂಡ ಇಲ್ಲದಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಅಲ್ಲಲ್ಲಿ ಗ್ರಾಮಸಭೆಗಳು ನಡೆದರೂ ಕೂಡ ಗ್ರಾಮದ ಜನರು ಭಾಗವಹಿಸುತ್ತಿಲ್ಲ.

**ಅಸಮರ್ಪಕ ಯೋಜನೆಗಳ ಅನುಷ್ಠಾನ**

ಮಹತ್ವಾಕಾಂಕ್ಷಿಯ ಭಾರತದ ಅಭಿವೃದ್ಧಿಗೆ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವುದು ಮಾರಕವಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯೂನಿಸೆಫ್ ವರದಿಯೊಂದರಂತೆ 2012ರಲ್ಲಿ ಭಾರತದ ಗ್ರಾಮೀಣ ಭಾಗಗಳಲ್ಲಿ ನಾಲ್ಕರಲ್ಲಿ ಒಂದು ಕುಟುಂಬಕ್ಕೆ ಮಾತ್ರ ಉತ್ತಮ ಶೌಚಾಲಯಗಳ ಲಭ್ಯತೆ ಇದೆ. ಬಯಲು ಮಲವಿಸರ್ಜನೆಯು ಕೇವಲ ಶುಚಿತ್ವಕ್ಕೆ ಸಂಬಂಧಿಸಿದ ವಿಷಯವಷ್ಟೇ ಅಲ್ಲ. ಇದು ಅನಾರೋಗ್ಯ, ಬಡತನ, ಮಹಿಳಾ ಸಬಲೀಕರಣ ಮತ್ತು ಮಾನವಾಭಿವೃದ್ಧಿ ಹಿನ್ನೆಡೆಯ ದ್ಯೋತಕವೂ ಹೌದು. ದೇಶದ ಪ್ರತಿಯೊಂದು ಹಳ್ಳಿಯನ್ನು ಬಯಲು ಮಲವಿಸರ್ಜನೆಯಿಂದ ಮುಕ್ತಗೊಳಿಸುವುದು ಗ್ರಾಮೀಣಾಭಿವೃದ್ಧಿಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಮಹತ್ತರ ಯೋಜನೆಯಾದ ನಿರ್ಮಲ ಭಾರತ ಅಭಿಯಾನವನ್ನು ಪ್ರತಿಯೊಂದು ರಾಜ್ಯದಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಈ ಯೋಜನೆಯ ಅನುಷ್ಠಾನ ಜವಾಬ್ದಾರಿಯನ್ನು ರಾಜ್ಯದ ಪಂಚಾಯತ್‌ರಾಜ್ ವ್ಯವಸ್ಥೆಯ ಮೇಲೆ ಇರಿಸಲಾಗಿದೆ. ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ನಿರ್ವಹಿಸುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ನಿರ್ಮಲ ಭಾರತ ಅಭಿಯಾನವನ್ನೊಳಗೊಂಡಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ತಯಾರಿಕೆ, ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತಿವೆ.

ನಿರ್ಮಲ ಭಾರತ ಅಭಿಯಾನದಡಿಯಲ್ಲಿ ವೈಯಕ್ತಿಕ ಮತ್ತು ಸಮುದಾಯ ಶೌಚಾಲಯಗಳನ್ನು ನಿರ್ಮಿಸುವುದು ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ, ಸ್ವಚ್ಛತೆಯ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸುವುದು ಮತ್ತು ಸುರಕ್ಷಿತವಾಗಿ ತ್ಯಾಜ್ಯ ವಿಲೇವಾರಿ ಮಾಡುವುದಕ್ಕೆ ಗ್ರಾಮ ಪಂಚಾಯಿತಿಗಳ ಮುಖಾಂತರ ಹಲವಾರು ಕಾರ್ಯಕಮಗಳನ್ನು ಹಮ್ಮಿಕೊಳ್ಳಲಾಗಿದೆ. ಇವುಗಳನ್ನು ಅನುಷ್ಠಾನಗೊಳಿಸಲು ಗ್ರಾಮ ಪಂಚಾಯಿತಿಗಳಿಗೆ ಆರ್ಥಿಕ ನೆರವು ನೀಡುವುದಲ್ಲದೇ ತಜ್ಞರ ಸಲಹೆ, ನೆರವು ಮತ್ತು ಸಹಯೋಗವನ್ನು ಒದಗಿಸಲಾಗುತ್ತದೆ. ನಿರ್ಮಲ ಭಾರತ ಅಭಿಯಾನ ಮತ್ತು ಉದ್ಯೋಗ ಖಾತರಿ ಯೋಜನೆಗಳ ಮೂಲಕ ಕುಟುಂಬವೊಂದಕ್ಕೆ ಸುಮಾರು ಒಂಬತ್ತು ಸಾವಿರ ರೂಪಾಯಿಗಳ ಧನ ಸಹಾಯ ಒದಗಿಸಿ ಬಡತನ ರೇಖೆ ಕೆಳಗಿರುವ ಕುಟುಂಬಗಳು ಶೌಚಾಲಯಗಳನ್ನು ಕಟ್ಟಿಕೊಳ್ಳುವಂತೆ

ಪೇರೇಪಿಸುವುದು, ಗ್ರಾಮದಲ್ಲಿ ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡುವುದು ಗ್ರಾಮ ಪಂಚಾಯಿತಿಗಳ ಪಮುಖ ಚಟುವಟಿಕೆಗಳು ಹಳ್ಳಿಗಳಲ್ಲಿ ಬಯಲು ಮಲವಿಸರ್ಜನೆ ಮುಕ್ತಗೊಳಿಸಲು ಉತ್ತೇಜಿಸುವುದಕ್ಕಾಗಿ ಅರ್ಹ ಗ್ರಾಮ ಪಂಚಾಯಿತಿಗಳಿಗೆ ನಿರ್ಮಲ ಗ್ರಾಮ ಪುರಸ್ಕಾರ ಎಂಬ ಬಿರುದು ಮತ್ತು ನಗದು ಪುರಸ್ಕಾರಗಳನ್ನು ಕೂಡ ನೀಡಲಾಗುತ್ತಿದೆ.

**ಗಾಮೀಣಾಬಿವೃದ್ಧಿಯಲ್ಲಿ ಗ್ರಾಮಸಭೆಗಳು ಮತ್ತು ವಾರ್ಡ್‌ಸಭೆಗಳು**

ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಅದರಲ್ಲಿಯೂ ಮುಖ್ಯವಾಗಿ ಗ್ರಾಮಸಭೆಯು ಮಹತ್ವದ ಪಾತ್ರವನ್ನು ಹೊಂದಿದೆ. ಕೆಳಮಟ್ಟದ ಆಡಳಿತದಲ್ಲಿ ಭಷ್ಟಾಚಾರವನ್ನು ತಡೆಗಟ್ಟಲು ಇದರಿಂದ ಸಾಧ್ಯವಾಗುತ್ತದೆ. ಜನರು ಜನಪ್ರತಿನಿಧಿಗಳನ್ನು ಪರಿಣಾಮಕಾರಿಯಾಗಿ ಹಾಗೂ ಹೊಣೆಗಾರಿಕೆಯಿಂದ ಕೆಲಸ ಮಾಡುವಂತೆ ಪೇರೇಪಿಸಿದಾಗ ಮಾತ್ರ ದಕ್ಷ ಸ್ಥಳೀಯ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಸರ್ಕಾರೇತರ ಸಂಘ ಸಂಸ್ಥೆಗಳು ಗಾಮೀಣ ಜನತೆಯಲ್ಲಿ ಗ್ರಾಮಸಭೆಗಳ ಮಹತ್ವದ ಬಗ್ಗೆ ಜಾಗೃತಿಯನ್ನು ಮೂಡಿಸಬೇಕು. ಗ್ರಾಮಪಂಚಾಯಿತಿಗಳ ಕಾರ್ಯನಿರ್ವಹಣೆಯ ಸಫಲತೆಯು ಗ್ರಾಮಸಭೆಗಳ ಯಶಸ್ವಿಯಾದ ಪಾತ್ರ ಮತ್ತು ಕೆಲಸಗಳ ಮೇಲೆ ಅವಲಂಬಿಸಿದೆ. ಆದ್ದರಿಂದ ಗ್ರಾಮಸಭೆಯು ಪರಿಣಾಮಕಾರಿಯಾಗಿ, ಜವಾಬ್ದಾರಿಯುತವಾಗಿ ಭಾಗವಹಿಸಬೇಕು. ಸ್ಥಳೀಯ ಮಟ್ಟದಲ್ಲಿ ಶಿಸ್ತು ಬದ್ಧತೆಯಿಂದ ಕೂಡಿದ ಪರಿಶುದ್ಧವಾದ ಆಡಳಿತವನ್ನು ಕಲ್ಪಿಸಲು ಗ್ರಾಮಸಭೆಗಳು ಪ್ರಾರಂಭಿಕ ತಳಹದಿಯನ್ನು ಒದಗಿಸುವಂತಿರಬೇಕು. ಇದರಿಂದಾಗಿ ಯೋಜನಾ ಪ್ರಕ್ರಿಯೆಗಳು ಕೆಳಹಂತದಲ್ಲಿ ಯಶಸ್ವಿಯಾಗಿ ರೂಪುಗೊಳ್ಳುತ್ತದೆ. ಗ್ರಾಮ ಪಂಚಾಯಿತಿ ಸದಸ್ಯರುಗಳು ಜವಾಬ್ದಾರಿಯುತವಾಗಿ ವರ್ತನೆ ಮಾಡಿದಾಗ ಮಾತ್ರ ಗ್ರಾಮಸಭೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದ ಅಧಿಕಾರಿಗಳು ಜನ ಪತಿನಿಧಿಗಳು ಮತ್ತು ಸರ್ಕಾರೇತರ ಸಂಘಸಂಸ್ಥೆಗಳ ಸಕ್ರಿಯ ಪಾತ್ರ ಮಹತ್ವದ್ದಾಗಿದೆ.

**ಸಂಪನ್ಮೂಲಗಳು ಮತ್ತು ಗ್ರಾಮಪಂಚಾಯಿತಿಗಳು**

ಸಂವಿಧಾನದ 73ನೇ ತಿದ್ದುಪಡಿಯನ್ವಯ ನಮೂದಿಸಿರುವ 29 ವಿಷಯಗಳನ್ನು ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯವ್ಯಾಪ್ತಿಗೆ ವರ್ಗಾಯಿಸಿರುವ ಮೊದಲ ರಾಜ್ಯ ಕರ್ನಾಟಕ ರಾಜ್ಯವಾಗಿದೆ. ನಿಜವಾದ ವಿಕೇಂದ್ರೀಕರಣ ಸಾಧಿಸಬೇಕಾದರೆ ದಕ್ಷ ಹಾಗೂ ಪರಿಣಾಮಕಾರಿ ಆಡಳಿತ ನಡೆಸಲು ಅಗತ್ಯವಾದಂತಹ ಸಂಪನ್ಮೂಲಗಳು ಮತ್ತು ಕೌಶಲ್ಯಗಳು ಅವಶ್ಯಕವಾಗಿವೆ. 73ನೇ ಸಂವಿಧಾನ ತಿದ್ದುಪಡಿಯ ಅನ್ವಯ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಪಡಿಸಲು ರಾಜ್ಯ ಹಣಕಾಸಿನ ಆಯೋಗವನ್ನು ಪ್ರತೀ ರಾಜ್ಯದಲ್ಲಿ ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಬಹುತೇಕ ಗ್ರಾಮ ಪಂಚಾಯಿತಿಗಳು ತಮ್ಮದೇ ಆದ ಸಂಪನ್ಮೂಲಗಳನ್ನು ಕೋಡೀಕರಿಸುವಲ್ಲಿ ವಿಫಲಗೊಂಡಿವೆ.

**ಉತ್ತಮ ಆಡಳಿತದ ಪರಿಕಲ್ಪನೆ**

ಇತ್ತೀಚಿನ ದಿನಗಳಲ್ಲಿ ಆಡಳಿತ ಮತ್ತು ಉತ್ತಮ ಆಡಳಿತ ಅಭಿವೃದ್ಧಿ ವಿಚಾರಗಳು ಪಮುಖ ವಿಷಯವಾಗಿದೆ. ಆಡಳಿತವೆಂದರೆ, ಯೋಜನೆಯ ನಿರ್ಧಾರಗಳನ್ನು ಕೈಗೊಂಡು ಅದನ್ನು ಅನುಷ್ಠಾನಗೊಳಿಸುವುದೇ ಆಗಿದೆ. ಆಡಳಿತದಲ್ಲಿ ನಡವಳಿಕೆ ಮತ್ತು ನೈತಿಕತೆಯ ಪಾಲನೆ ಅತ್ಯವಶ್ಯಕ. ಉತ್ತಮ ಆಡಳಿತವು ಪಾರದರ್ಶಕತೆ, ಪರಿಣಾಮಕಾರಿ, ನ್ಯಾಯಸಮ್ಮತ ಮತ್ತು ಕಾನೂನಿನ ಪಾಲನೆಯನ್ನು ಉತ್ತೇಜಿಸುತ್ತದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಆದ್ಯತೆಗಳನ್ನು ಸಮಾಜದಲ್ಲಿ ಖಾತರಿಪಡಿಸುತ್ತದೆ ಮತ್ತು ವಿಸ್ತಾರ ಒಮ್ಮತವನ್ನು

ಆಧರಿಸಿದೆ. ಬಡ ಮತ್ತು ಅತ್ಯಂತ ದುರ್ಬಲ ಜನರ ಧ್ವನಿಯ ಆಧಾರದ ಮೇಲೆ ಅಭಿವೃದ್ಧಿಯ ಪ್ರಕಾರ ಮುಂದಿನ ಲಕ್ಷಣಗಳನ್ನು ಉತ್ತಮ ಆಡಳಿತವು ಹೊಂದಿದೆ.

ಒಳಗೊಳ್ಳುವ ಬೆಳವಣಿಗೆ ಎನ್ನುವ ಪರಿಭಾವನೆಯನ್ನು ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳು ಅಳವಡಿಸಿಕೊಳ್ಳುತ್ತಿವೆ. ಇದರ ಉದ್ದೇಶ ಆರ್ಥಿಕ ಬೆಳವಣಿಗೆಯಿಂದ ಉಂಟಾಗುವ ಆರ್ಥಿಕ ಅವಕಾಶಗಳು ಎಲ್ಲರಿಗೂ ಅದರಲ್ಲೂ ಬಡವರಿಗೆ ಲಭಿಸಬೇಕೆಂಬ ಮಹತ್ತರದ ಉದ್ದೇಶ. ನರೇಗಾ ಒಂದು ಒಳಗೊಳ್ಳುವ ತಂತವ್ಯೂಹವಾಗಿದ್ದು ಅದು ನೂರು (ಇದೀಗ 150) ದಿನಗಳ ಕಾನೂನಿನ ಗ್ಯಾರಂಟಿ, ಭದ್ರತೆಯನ್ನು ಒದಗಿಸುತ್ತದೆ. ಈ ಅವಕಾಶವು ಗ್ರಾಮೀಣ ಪದೇಶಗಳಲ್ಲಿ ಉಪಯುಕ್ತ ಆಸ್ತಿಗಳನ್ನು ಸೃಷ್ಟಿಸಿ, ಶ್ರಮಾಧಾರಿತ ಕಾಮಗಾರಿಗಳಿಗೆ ಬೃಹತ್ ಲಭ್ಯತೆಯನ್ನು ಒದಗಿಸುತ್ತ, ತನ್ಮೂಲಕ ಪರಿಸರ ರಕ್ಷಣೆ, ಭೂಮಿಯ ಪುನರುಜ್ಜೀವನ, ಗ್ರಾಮೀಣ ಕೆರೆಗಳ ಪುನರುಜ್ಜೀವನ, ನೀರಾವರಿ ಸೌಲಭ್ಯಗಳು, ಸಣ್ಣ ಮತ್ತು ಕಿರು ನೀರಾವರಿ ಕಾಮಗಾರಿಗಳು ಮುಂತಾದವುಗಳು ಸೃಷ್ಟಿಸುವುದಾಗಿದೆ. ಜೊತೆಗೆ ಗಾಮೀಣ ಪದೇಶದಲ್ಲಿ ಅಗತ್ಯವಿರುವ ರಸ್ತೆ ರಿಪೇರಿ, ಶಾಲಾ ಕಟ್ಟಡಗಳ ರಿಪೇರಿ, ನೀರು ಸರಬರಾಜು ಮುಂತಾದ ಮೂಲಸೌಕರ್ಯಗಳನ್ನು ಒದಗಿಸುತ್ತದೆ.

ಗ್ರಾಮೀಣಾಭಿವೃದ್ಧಿಯು ಸಾಮಾನ್ಯ ಜನರ ಯೋಗಕ್ಷೇಮವನ್ನು ಹೆಚ್ಚಿಸುವುದು ಮತ್ತು ಅವರ ಸಾಮಾಜಿಕ ಆರ್ಥಿಕ ಸಬಲೀಕರಣವನ್ನು ವೃದ್ಧಿಸುವುದನ್ನು ಒಳಗೊಂಡಿದೆ ಹಾಗೂ ಅವರಿಗೆ ಹೆಚ್ಚಿನ ಪ್ರಮಾಣದ ಮೂಲ ಸಾಮಾಜಿಕ ಸೇವೆಗಳು– ಶಿಕ್ಷಣ, ಆರೋಗ್ಯ, ಶುದ್ಧ ಕುಡಿಯುವ ನೀರು ಒದಗಿಸುವುದು ಮತ್ತು ಉತ್ಪಾದಕ ಉದ್ಯೋಗ ಒದಗಿಸುವುದು, ಜೊತೆಗೆ ಗ್ರಾಮೀಣ ಆಡಳಿತ ಮತ್ತು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಅವರು ತೊಡಗಿಸುವಂತೆ ಮಾಡುವುದು.

ಆದುದರಿಂದ ಗ್ರಾಮೀಣಾಭಿವೃದ್ಧಿ ಗತಿಯನ್ನು ಹೆಚ್ಚಿಸಲು, ಕೃಷಿ ಅಭಿವೃದ್ಧಿಯ ಜೊತೆಗೆ ಶಿಕ್ಷಣ, ಆರೋಗ್ಯ ಮತ್ತಿತರ ಸಾಮಾಜಿಕ ಕ್ಷೇತ್ರಗಳ ಮೂಲ ಸೌಲಭ್ಯಗಳನ್ನು ದೊರೆಯುವಂತೆ ಮಾಡುವುದು. ಇದಕ್ಕಾಗಿ ಆಡಳಿತಾತ್ಮಕ ಸಂಸ್ಥೆಗಳು ಮತ್ತು ಸರಿಹೊಂದುವ ನೀತಿ ನಿರೂಪಣೆಗಳು ಅತ್ಯವಶ್ಯಕ.

ಭಾರತದಲ್ಲಿ ಗ್ರಾಮೀಣಾಭಿವೃದ್ಧಿಯು ರಾಷ್ಟ್ರದ ಒಟ್ಟಾರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯ ಒಂದು ಏಕೀಕೃತ ಭಾಗವಾಗಿದ್ದು, ಅದು ಕೇವಲ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಮಾತ್ರವಾಗಿರದೆ ಇಡೀ ಗ್ರಾಮೀಣ ಸಮುದಾಯಗಳ ಅಭಿವೃದ್ಧಿಯೇ ಆಗಿದೆ. ಬಡತನ, ಅಜ್ಞಾನಗಳನ್ನು ತೊಡೆದು ಹಾಕಿ ಗ್ರಾಮೀಣ ಜನತೆಯಲ್ಲಿ ಸ್ವಾವಲಂಬನೆ ಮತ್ತು ಸುಸ್ಥಿರ ಆರೋಗ್ಯದ ಆಧುನಿಕ ಸಮುದಾಯಗಳನ್ನು ಸೃಷ್ಟಿಸುವುದಾಗಿದೆ.

ಗ್ರಾಮಗಳು ಸಮೃದ್ಧ, ಸ್ವಯಂ ಪರಿಪೂರ್ಣ, ಸ್ವಯಂ ಶಕ್ತಿಶಾಲಿಯಾಗಿ ಸ್ವಾವಲಂಬಿ ಗ್ರಾಮಗಳಾದಾಗ ಮಾತ್ರ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಇದಕ್ಕಾಗಿ ಅಧಿಕಾರ ಮತ್ತು ಜವಾಬ್ದಾರಿಯನ್ನು ವಿಕೇಂದ್ರೀಕರಿಸಲಾಗುತ್ತಿದೆ. ಅಧಿಕಾರ ಮತ್ತು ಅದರ ನಿಯಂತಣ ಜನರ ಹಿಡಿತದಲ್ಲಿರಬೇಕು. ಪ್ರಜಾಪ್ರಭುತ್ವದ ಮೂಲಘಟಕವಾದ ಗ್ರಾಮಗಳ ಸ್ವಯಂ ಪರಿಪೂರ್ಣ ಮತ್ತು ಸ್ವಾವಲಂಬಿ ಗ್ರಾಮಗಳಾದಾಗ ಮಾತ್ರ ನೈಜವಾದ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಹಾಗೂ ಪಜಾಪಭುತ್ವಕ್ಕೆ ಅರ್ಥ ಬರುತ್ತದೆ. ಶೋಷಣೆ, ಅನ್ಯಾಯ, ತಾರತಮ್ಯ, ಅಸಮಾನತೆಗಳಿಂದ ಗ್ರಾಮಗಳನ್ನು ಮುಕ್ತಗೊಳಿಸಬೇಕು. ಅಧಿಕಾರವು ಮೇಲಿನ ಸ್ತರದಿಂದ ಕೆಳಸ್ತರಕ್ಕೆ ಹರಿಯುವ ಬದಲು ಕೆಳಸ್ತರದಿಂದ ಮೇಲಿನ ಸ್ತರಕ್ಕೆ ಹರಿಯಬೇಕು. ಆಡಳಿತಾತ್ಮಕವಾಗಿ ಮಾತವಲ್ಲದೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಧಿಕಾರಗಳು ವಿಕೇಂದ್ರೀಕರಿಸಲ್ಪಡಬೇಕು. ಅಂದರೆ ಆರ್ಥಿಕ ಕ್ಷೇತದಲ್ಲಿ ತಮ್ಮದೇ ಆದ ಯೋಜನೆಗಳನ್ನು

ರೂಪಿಸಿ ಅನುಷ್ಠಾನಕ್ಕೆ ತರುವಲ್ಲಿ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಕೋಢೀಕರಿಸುವಲ್ಲಿ ಮತ್ತು ಅದನ್ನು ವಿನಿಯೋಗಿಸುವುದರಲ್ಲಿ ಹಾಗೂ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಹಾಗೂ ಅಭಿವೃದ್ಧಿ ಕಮಗಳನ್ನು ಕೈಗೊಳ್ಳುವಲ್ಲಿ ಗ್ರಾಮಗಳಿಗೆ ಹೆಚ್ಚು ಅಧಿಕಾರ ಮತ್ತು ಜವಾಬ್ದಾರಿಗಳನ್ನು ನೀಡಿದಲ್ಲಿ ಸದೃಢವಾದ ಸಂಪದ್ಭರಿತ ಗ್ರಾಮಗಳಾಗಿ ಅಭಿವೃದ್ಧಿ ಹೊಂದುತ್ತವೆ.

ಗ್ರಾಮೀಣಾಭಿವೃದ್ಧಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಡಳಿತ ಕ್ಷೇತ್ರದಲ್ಲಿ ಪ್ರಗತಿ, ಸುಧಾರಣೆ ಹಾಗೂ ಬದಲಾವಣೆಯ ಎಲ್ಲಾ ಆಯಾಮಗಳನ್ನು ಒಳಗೊಂಡಿದೆ. ಇವೆಲ್ಲದಕ್ಕೂ ಪೂರಕವಾಗಿ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ನಿಜವಾದ ಪ್ರಜಾಪ್ರಭುತ್ವವು ಉನ್ನತ ಮಟ್ಟದಲ್ಲಿ ಕೆಲವೇ ಮಂದಿಯಿಂದ ನಿರ್ಧರಿಸುವುದಲ್ಲ, ಅದು ಕೆಳಹಂತದಲ್ಲಿನ ಪ್ರತಿಗ್ರಾಮದ ಜನರಿಂದಲೂ ಕಾರ್ಯರೂಪಕ್ಕೆ ಬರಬೇಕು.

**ಉಪಸಂಹಾರ**

ಗ್ರಾಮ ಪಂಚಾಯಿತಿ ಮತ್ತು ಅಭಿವೃದ್ಧಿ ಕುರಿತಂತೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಪಾಯೋಗಿಕ ಸನ್ನಿವೇಶವನ್ನು ಪರಾಮರ್ಶಿಸಲಾಗಿದೆ. ಉತ್ತಮ ಆಡಳಿತವೂ ಅಭಿವೃದ್ಧಿಯ ಭಾಗವೇ ಆಗಿರುವುದನ್ನು ಇತ್ತೀಚೆಗೆ ನೋಡಬಹುದು. ಗಾಮೀಣಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ಆಡಳಿತವು ಹೇಗೆ ಪಮುಖ ಎಂಬ ವಿಚಾರವನ್ನು ಅವಲೋಕಿಸಿದ್ದು, ಇದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕಂಡುಬರುವ ಬಗೆಯನ್ನು ಸಮಗ್ರವಾಗಿ ತುಲನೆ ಮಾಡಲಾಗಿದೆ. ಸೈದ್ಧಾಂತಿಕವಾಗಿ ಬದಲಾಗುತ್ತಿರುವ ಅಭಿವೃದ್ಧಿ ಆಡಳಿತ ಪರಿಭಾವನೆಗಳು ಪಂಚಾಯಿತಿಗಳ ಕಾರ್ಯಾಚರಣೆಯಲ್ಲಿ ಹೇಗೆ ಕಾರ್ಯೋನ್ಮುಖವಾಗುತ್ತಿವೆ ಇದಕ್ಕೆ ಇರುವ ಅಡಚಣೆಗಳು ಯಾವುವು? ಎಂಬ ವಿಷಯವನ್ನು ಪಸ್ತುತ ಲೇಖನದಲ್ಲಿ ಅವಲೋಕಿಸಲಾಗಿದೆ. ನಿರೀಕ್ಷೆಗೆ ತಕ್ಕಂತೆ ಗ್ರಾಮ ಪಂಚಾಯಿತಿಗಳು ಅಭಿವೃದ್ಧಿ ಪ್ರಕ್ರಿಯೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳಲು ಇರುವ ಅಡಚಣೆಗಳನ್ನು ತಿಳಿಸಲಾಗಿದೆ. ಆಡಳಿತಾತ್ಮಕವಾಗಿ ಪಂಚಾಯಿತಿಗಳು ಇಂದು ಗೊಂದಲದಲ್ಲಿ ಸಿಲುಕಿವೆ. ಇದರಿಂದಾಗಿ ಯೋಜನೆಗಳು ಇಂದು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಗ್ರಾಮಾಭಿವೃದ್ಧಿಯಲ್ಲಿ ಗ್ರಾಮಸಭೆಗಳು ಮತ್ತು ವಾರ್ಡ್‌ಸಭೆಗಳು ನಿಯಮಿತವಾಗಿ ನಡೆಯುತ್ತಿಲ್ಲವಾದ್ದರಿಂದ ಅಭಿವೃದ್ಧಿ ಯೋಜನೆಗಳು ಸವಿವರವಾಗಿ ಚರ್ಚೆಯಾಗದೆ ಅನುಷ್ಠಾನವಾಗುತ್ತಿರುವುದು ಸರಿಯಷ್ಟೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್, ಟಿ.ಆರ್. (2004). *ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚಂದ್ರಶೇಖರ್, ಕೆ. (2012). *ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು.* ದೀಪಾ ಪಬ್ಲಿಕೇಷನ್ಸ್.
- ಜಾರ್ಜ್ ಮ್ಯಾಥ್ಯೂ. (1986). *ಪಂಚಾಯತ್ ರಾಜ್ ಕರ್ನಾಟಕ ಟುಡೇ ನ್ಯಾಷನಲ್ ಡೈಮೆನ್ಷನ್.* ಕಾನ್ಸೆಪ್ಟ್ ಪಬ್ಲಿಷಿಂಗ್.
- ನರಸಿಂಹಮೂರ್ತಿ, ಎಸ್.ಎನ್. (2003). *ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ.* ಕರ್ನಾಟಕ ವಿಕಾಸ.
- ನಾಯಕ್, ಪಿ.ಆರ್. (1996). *ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993.* ತಜ್ಞರ ಸಮಿತಿ ವರದಿ. ಕರ್ನಾಟಕ ಸರ್ಕಾರ.
- ಪಾಟಿಲ್, ಎಂ.ಬಿ. (1998). *ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.* ಕರ್ನಾಟಕ ವಿಕಾಸ.